**<u>ದಿನಾಂಕ 30-09-2024 ರಂದು ಸಾಕ್ಷಿಯನ್ನು ಕರೆಯಿಸಿ ಮುಖ್ಯ ವಿಚಾರಣೆಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಶ್ರೀ.ಆರ್. ಬಿ. ವಾದಿ ಪರ ವಕೀಲರಿಂದಃಃ</u>**

ನಾನು 2 ನೇ ವಾದಿ ಇದ್ದು , ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಯಿಸಿ ತಿಳಿದುಕೊಂಡಿರುತ್ತೇನೆ ಹಾಗೂ ಈ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಮಾಡಿ ಸಹಿ ಮಾಡಿರುತ್ತೇನೆ.

ನಾನು ಈಗಾಗಲೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ಅವುಗಳನ್ನು ನಾನು ನೋಡಿ ಗುರುತಿಸಿದ್ದು, ನಂತರ ಈ ಕೆಳಕಂಡಂತೆ ದಾಖಲಾತಿಗಳನ್ನು ಗುರುತಿಸಲಾಯಿತು.

ಸಾಕ್ಷಿಯು ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ-1 ಎಂದು, ಸಾಕ್ಷಿಯು ದಿ.30-09-2019 ರ ವಿಭಾಗ ಪತ್ರದ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯು ನಮೂನೆ 10 ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯು ಮ್ಯುಟೇಶನ್ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿಯು ಮ್ಯುಟೇಶನ್ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು(ಸದರಿ ದಾಖಲೆಯು ಮಧ್ಯಭಾಗದಲ್ಲಿ ಪೂರ್ತಿಯಾಗಿ ಹರಿದಿರುತ್ತದೆ.), ಸಾಕ್ಷಿಯು 3 ಪಹಣಿ ಪತ್ರಿಕೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-6 ರಿಂದ 8 ಎಂದು ಗುರುತಿಸಲಾಯಿತು.

**<u>ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು ಸಮಯಾವಕಾಶ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಇದೆ.**

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಿಂಧನೂರು.